**ದಿನಾಂಕಃ 09.01.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ ಪಾಟೀ ಸವಾಲುಃ **ವಾದಿ ಪರ ಶ್ರೀ. ಎಚ್.ಎನ್.ಬಿ.ಎನ್ ವಕೀಲರಿಂದಃ**

ನನ್ನ ತಾತನ ಹೆಸರು ಎಂದರೆ ಪ್ರತಿವಾದಿಯ ತಂದೆಯ ಹೆಸರು ಮಂಚೇಗೌಡ ಯಾನೇ ಚಿಕ್ಕವ. ಸದರಿ ಮಂಚೇಗೌಡ ಯಾನೇ ಚಿಕ್ಕವ ರವರಿಗೆ ಐದು ಜನ ಗಂಡು ಮಕ್ಕಳು. ಸದರಿ ಮಂಚೇಗೌಡ ಯಾನೇ ಚಿಕ್ಕವ ರವರು ಯಾವಾಗ ಮರಣ ಹೊಂದಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ಸಹೋದರರ ನಡುವೆ ಯಾವಾಗ ವಿಭಾಗವಾಯಿತು ಎಂದು ನನಗೆ ನೆನಪಿಲ್ಲ. ನಿಡಿ-37 ರ ಸ್ಕೆಚ್ ನಲ್ಲಿ ನಮೂದಿಸಿರುವ ವಿಚಾರಗಳು ನನಗೆ ಗೊತ್ತಿರುತ್ತವೆ. ಪ್ರತಿವಾದ ಪತ್ರದಲ್ಲಿ ತಿಳಿಸಿದಂತೆ ತೊಟ್ಟಿ ಮನೆಯು ನನ್ನ ತಂದೆ ಮತ್ತು ಆತನ ನಾಲ್ಕು ಜನ ಸಹೋದರರ ನಡುವೆ ವಿಭಾಗವಾಗಿರುತ್ತದೆ. ನಿಡಿ-37 ರಲ್ಲಿ ನಮೂದಿಸಿರುವ 13, 14,12, 11 ರ ಕಚ್ಚಾ ನಕಾಶೆಯಂತೆ ಸದರಿ ಭಾಗವು ನನ್ನ ತಂದೆಯ ತಮ್ಮನಾದ ಕೃಷ್ಣೇಗೌಡ ರವರ ಭಾಗಕ್ಕೆ ಹೋಗಿರುತ್ತದೆ. ಸದರಿ ಭಾಗವು ಕೃಷ್ಣೇಗೌಡ ರವರ ಭಾಗಕ್ಕೆ ಹೋಗಿದೆ ಎಂದು ಪ್ರತಿವಾದ ಪತ್ರದಲ್ಲಿ ಮತ್ತು ನಿಡಿ-37 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಕೃಷ್ಣೇಗೌಡ ರವರ ನಡುವೆ ವಿಭಾಗವಾಯಿತು ಎಂದು ತೋರಿಸಲು ಯಾವುದೇ ದಾಖಲಾತಿಗಳು ಇರುವುದಿಲ್ಲ. ನಿಡಿ-37 ರಲ್ಲಿ ನಮೂದಿಸಿರುವ 13, 14 ರ ಗೋಡೆಯನ್ನು 2006 ರಲ್ಲಿ ನಿರ್ಮಾಣ ಮಾಡಿರುತ್ತೇವೆ. ಸದರಿ ಗೋಡೆಯು 2006 ರಲ್ಲಿ ನಿರ್ಮಾಣವಾಯಿತು ಎಂದು ತೋರಿಸಲು ಯಾವುದೇ ದಾಖಲಾತಿಗಳು ಇರುವುದಿಲ್ಲ. ಸದರಿ ಗೋಡೆಯು 2006 ರಲ್ಲಿ ನಿರ್ಮಾಣವಾಯಿತು ಎಂದು ನಾವು ಪ್ರತಿವಾದ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ.

ನಿಡಿ-37 ರಲ್ಲಿ ನಮೂದಿಸಿರುವ 3, 4, 12, 11 ರ ವಿಸ್ತೀರ್ಣ ಪೂರ್ವ ಪಶ್ಚಿಮವಾಗಿ 69 ಅಡಿ, ಉತ್ತರ ದಕ್ಷಿಣವಾಗಿ 69 ಅಡಿ ಇರುತ್ತದೆ. ಸದರಿ ವಿಸ್ತೀರ್ಣವನ್ನು ಪ್ರತಿವಾದ ಪತ್ರದಲ್ಲಿ ಮತ್ತು ನಿಡಿ-37 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸದರಿ ತೊಟ್ಟಿ ಮನೆಯಲ್ಲಿ ನನ್ನ ಚಿಕ್ಕಪ್ಪ ಕೃಷ್ಣೇಗೌಡ ರವರಿಗೆ 35 ಅಡಿ ಅಗಲ ಮತ್ತು 69 ಅಡಿ ಉದ್ದದ ಭಾಗ ಹೋಗಿರುತ್ತದೆ. ಅದೇ ರೀತಿ ಸದರಿ ತೊಟ್ಟಿ ಮನೆಯಲ್ಲಿ ನಮ್ಮ ತಂದೆಗೆ 47 ಅಡಿ ಅಗಲ, ಮತ್ತು 69 ಅಡಿ ಉದ್ದದ ಭಾಗ ಬಂದಿರುತ್ತದೆ. ಸದರಿ ವಿಸ್ತೀರ್ಣದ ಆಸ್ತಿಯು

ನಮ್ಮ ಭಾಗಕ್ಕೆ ಬಂತು ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆ ಯಾವುದು ಎಂದು ನನಗೆ ನೆನಪಿಲ್ಲ.

ದಿನಾಂಕ 02.06.1989 ರ ನೊಂದಾಯಿತ ಕ್ರಯ ಪತ್ರದ ಮೂಲಕ ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಅನುಸೂಚಿ ಸ್ವತ್ತನ್ನು ಖರೀದಿಸಿರುತ್ತೇವೆ. ನಿಡಿ-37 ರಲ್ಲಿ ನಮೂದಿಸಿರುವ 5, 6, 4, 3 ರ ವರಾಂಡವನ್ನು 1973 ರಲ್ಲಿ ನಿರ್ಮಿಸಿರುತ್ತೇವೆ. ಸದರಿ ವರಾಂಡವು 15 ಅಡಿ ಅಗಲ ಮತ್ತು 69 ಅಡಿ ಉದ್ದ ಇರುತ್ತದೆ. ಸದರಿ ವರಾಂಡವನ್ನು 1973 ರಲ್ಲಿ ನಿರ್ಮಿಸಿದ್ದೇವೆ ಎಂದು ತೋರಿಸಲು ಯಾವುದೇ ದಾಖಲಾತಿಗಳು ಇರುವುದಿಲ್ಲ. ನಮ್ಮ ಮನೆಯ ಉತ್ತರಕ್ಕೆ ಮುಖ್ಯ ರಸ್ತೆ ಬರುತ್ತದೆ ಎಂದರೆ ಸರಿ. ಸದರಿ ನಮ್ಮ ಮನೆಯ ದಕ್ಷಿಣಕ್ಕೆ ವಾದಿಯವರ ಮನೆ ಬರುತ್ತದೆ ಎಂದರೆ ಸರಿ. ವಾದಿಯವರು ಉತ್ತರ ದಿಕ್ಕಿಗೆ ಇರುವ ರಸ್ತೆಗೆ ಸಂಪರ್ಕಿಸಲು ನಿಡಿ-37 ರಲ್ಲಿ ನಮೂದಿಸಿರುವ 5, 6, 4, 3 ರ ಜಾಗದಲ್ಲಿ ಓಡಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ವಾದಿಯವರಿಗೆ ಬೇರೆ ಎರಡು ಕಡೆ ಓಡಾಡಲು ಜಾಗ ಇದೆ ಎಂದು ನುಡಿಯುತ್ತಾರೆ. ವಾದಿಯವರ ಮನೆಯಿಂದ ಉತ್ತರ ದಿಕ್ಕಿಗೆ ಇರುವ ಮುಖ್ಯ ರಸ್ತೆಗೆ ಇರುವ ರಸ್ತೆಗೆ ಸಂಪರ್ಕ ಕಲ್ಪಿಸಲು ನಿಡಿ-37 ರಲ್ಲಿ ನಮೂದಿಸಿರುವ 5, 6, 4, 3 ರ ಜಾಗವನ್ನು ಹೊರತುಪಡಿಸಿ ಬೇರೆ ಜಾಗ ಇಲ್ಲ ಎಂದರೆ ಸರಿಯಲ್ಲ.

<u>ಮುಂದುವರಿದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ